



ರಾಜ್ಯದಲ್ಲಿ ನೀರಾ ನೀತಿ ಜಾರಿಯಾದರೆ ತೆಂಗು ಬೆಳೆಗಾರರ ಪಾಲಿಗೆ ಸುವರ್ಣಯುಗವೊಂದು ಪ್ರಾರಂಭವಾಗಲಿದೆ. ನೀರಾ ಇಳಿಸಲು ಅಬಕಾರಿ ಕಾಯ್ದೆಗೆ ತಿದ್ದುಪಡಿ ತಂದು ಅನುಮತಿ ನೀಡುವ ಬಗ್ಗೆ ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಪ್ರಸ್ತಾಪಿಸಿದೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ನೀರಾ ನೀತಿ ಜಾರಿ ಪ್ರಸ್ತುತತೆಯ ಕುರಿತು ಈ ಬರಹ.

# ತುಂತುರು... ಇಲ್ಲಿ ನೀರಾ ಹಾಡು...



## ರಾಜ್ಯಕ್ಕೆ ನೀರಾ ದಿನಗಳು ಬರಲಿವೆಯೆ?



### ಅನುಕೂಲಗಳೇನು?

ಸಿಪಿಸಿಆರ್‌ಐ ಕಾಸರಗೋಡು ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವಂತೆ 100 ತೆಂಗಿನಮರಗಳಿಂದ ತಿಂಗಳಿಗೆ 3,36,000ರೂ. ಆದಾಯ ಗಳಿಸಬಹುದು. ಇದರಿಂದ ತೆಂಗು ಉತ್ಪಾದಕರ ಆರ್ಥಿಕಾಭಿವೃದ್ಧಿ ಸಾಧ್ಯ. ತೆಂಗು ಉತ್ಪಾದಕ ಕಂಪನಿಗಳು ನೀರಾ ಉತ್ಪನ್ನಗಳ ಮೌಲ್ಯವರ್ಧನೆಗೆ ತೊಡಗುವುದರಿಂದ ಹಳ್ಳಿಗಳಲ್ಲಿ ಉದ್ಯೋಗ ಸೃಷ್ಟಿಯಾಗುತ್ತದೆ. ಇದರಿಂದ ಹಳ್ಳಿಗಳ ಆರ್ಥಿಕತೆಯೂ ಅಭಿವೃದ್ಧಿ ಹೊಂದುತ್ತದೆ. ಸಿಹಿ ನೀರಾ ಮಾರಾಟದಿಂದ ಹಳ್ಳಿಗಳ ಹಣವು ಪೆಪ್ಸಿ, ಕೋಲಾದಂತಹ ಬಹುರಾಷ್ಟ್ರೀಯ ಕಂಪನಿಗಳ ಕೈಸೇರುವುದು ತಪ್ಪುತ್ತದೆ.




ಅಣೇಕಟ್ಟೆ ವಿಶ್ವನಾಥ್

ತೆಂಗು ಬೆಳೆಗಾರರ ಪಾಲಿಗೆ ಇದೊಂದು ಸಂಕ್ರಮಣ ಕಾಲ. ತೆಂಗಿನ ಮರದಿಂದ ನೀರಾ ಇಳಿಸಲು ಅಬಕಾರಿ ಕಾಯ್ದೆಗೆ ತಿದ್ದುಪಡಿ ತಂದು ಅನುಮತಿ ನೀಡಲಾಗುವುದು ಎಂದು ಕರ್ನಾಟಕ ಸರ್ಕಾರವು ಈ ಬಾರಿಯ ಬಜೆಟ್‌ನಲ್ಲಿ ಘೋಷಿಸಿದೆ. ನೀರಾ ಇಳಿಸಿದರೆ ಅಬಕಾರಿ ಇಲಾಖೆಗೆ ವರಮಾನ ಕಡಿಮೆಯಾಗುವುದು ಎಂದು ಕೆಲವರು ಆತಂಕ ವ್ಯಕ್ತಪಡಿಸಿದ್ದಾರೆ. ಅದಲ್ಲದೆ ಸ್ವತಃ ಅಬಕಾರಿ ಇಲಾಖೆಗೂ ಈ ಅನುಮಾನ ಇದ್ದೇ ಇದೆ. ಮುಖ್ಯಮಂತ್ರಿಯವರ ಸೂಚನೆಯ ಮೇರೆಗೆ ಒಪ್ಪಿಗೆ ನೀಡಿರುವ ಅಬಕಾರಿ ಕಮೀಷನರ್ ನೀರಾ ಶೇಂದಿಯಾಗದಂತೆ ಕಟ್ಟುನಿಟ್ಟಾಗಿ ತಡೆಯುವ ಜವಾಬ್ದಾರಿಯನ್ನು ತೋಟಗಾರಿಕಾ ಇಲಾಖೆಯು ವಹಿಸಿಕೊಳ್ಳಬೇಕು ಎಂದು ಹೇಳಿದೆ. ತಾರ್ಕಿಕವಾಗಿ ನೀರಾವನ್ನು ಶೇಂದಿಯಾಗದಂತೆ ತಡೆಯುವುದು ತೋಟಗಾರಿಕೆ ಇಲಾಖೆಯ ಜವಾಬ್ದಾರಿಯಲ್ಲ. ಅಬಕಾರಿ ಇಲಾಖೆಯು ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಹೀಗೆ ಹೇಳುತ್ತಿದೆ. ಇದರಿಂದ ಅಪಾರ ಸಾಧ್ಯತೆಗಳುಳ್ಳ ನೀರಾ ಉದ್ಯಮ ಕರ್ನಾಟಕದಲ್ಲಿ ಇನ್ನೂ ಪ್ರಾರಂಭವಾಗಿಲ್ಲ.

ಅಬಕಾರಿ ಇಲಾಖೆಯ ಆತಂಕದ ಗಾಯಕ್ಕೆ ಉಪ್ಪು ಸವರುವಂತೆ ರೈತಸಂಘವೂ ನೀರಾ ಮಾರಾಟ ಮಾಡುವುದು ರೈತರ ಹಕ್ಕು ಎಂದು ಹೇಳುತ್ತದೆ. ಆದರೆ ವಾಸ್ತವದಲ್ಲಿ ಆಗುತ್ತಿರುವುದೇನೆಂದರೆ ರೈತಸಂಘದ ಕೃಪಾಕಟಾಕ್ಷದಲ್ಲಿ ನೀರಾ ಇಳಿಸುತ್ತಿರುವ ಅನೇಕರು ಹುಳಿಬರಿಸಿ ಮಾರುತ್ತಿದ್ದಾರೆ. ಇನ್ನೂ ಕೆಲವರು ಅಮಲು ಬರಿಸುವ ರಾಸಾಯನಿಕಗಳನ್ನೂ ಸೇರಿಸಿ ಮಾರುತ್ತಿದ್ದಾರೆ. ಇದರಿಂದ ರೈತರಿಗೆ ಸಿಗುವ ಹಣ ಒಂದು ಲೀಟರ್‌ಗೆ ಬರೀ 20ರಿಂದ 30 ರೂ. ಈ ಮಾರಾಟದಲ್ಲಿಯೂ ರೈತರ ಶೋಷಣೆ ನಡೆಯುತ್ತಿದೆ. ಇದರ ನಡುವೆ ಮಧ್ಯಸ್ಥಗಾರರು ಹಣ ಗಳಿಸುತ್ತಿದ್ದಾರೆ. ಇದರಿಂದ ಅಬಕಾರಿ ದೊರೆಗಳಿಗೆ ಒಂದಿಷ್ಟು ನಷ್ಟವಾಗುತ್ತಿರುವುದೂ ಸತ್ಯ.

ಐದು ಲಕ್ಷ ಹೆಕ್ಟೇರ್ ತೆಂಗು ಉತ್ಪಾದನಾ ಪ್ರದೇಶವನ್ನು ಹೊಂದಿರುವ ಕರ್ನಾಟಕ ತೆಂಗು ಉತ್ಪಾದನೆಯಲ್ಲಿ ಭಾರತದಲ್ಲೇ ಎರಡನೇ ಸ್ಥಾನದಲ್ಲಿದೆ. ಒಟ್ಟು ಉತ್ಪಾದನೆಯಲ್ಲಿ ಶೇ.95ರಷ್ಟು ಪಾಲು ಸಣ್ಣ ಮತ್ತು ಅತೀ ಸಣ್ಣ ರೈತರದ್ದು. ಭಾರತದಲ್ಲಿಯೇ ಹೆಚ್ಚು ತೆಂಗು ಬೆಳೆಯುವ ಜಿಲ್ಲೆ ಎಂಬ ಖ್ಯಾತಿಗೆ ಪಾತ್ರವಾಗಿರುವ ತುಮಕೂರು 1,42,000 ಹೆಕ್ಟೇರ್ ತೆಂಗು ಬೆಳೆಯುವ ಪ್ರದೇಶವನ್ನು ಹೊಂದಿದೆ. ಅಲ್ಲದೆ ನಂತರದ ಸ್ಥಾನದಲ್ಲಿರುವ ಹಾಸನ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಬಹುಪಾಲು ಕೃಷಿಕರ ವಾರ್ಷಿಕ ಆಯವ್ಯಯವು ತೆಂಗಿನ ಬೆಳೆ ಮತ್ತು ಬೆಲೆಯನ್ನು ಅವಲಂಬಿಸಿದೆ. ಎಳನೀರು, ತೆಂಗಿನಕಾಯಿ ಮತ್ತು ಉಂಡೆ ಕೊಬ್ಬರಿ ಪ್ರಮುಖವಾದ ಮಾರಾಟ ಉತ್ಪನ್ನಗಳು. ಇವುಗಳ ಬೆಲೆ ಎಂದಿಗೂ ಮಾರುಕಟ್ಟೆಯಲ್ಲಿ ಸ್ಥಿರತೆಯನ್ನು ಕಂಡಿಲ್ಲ. ಇದರಿಂದ ಇದರ ಅಪಾರವಾದ ಮೌಲ್ಯವರ್ಧನೆಯ ಸಾಧ್ಯತೆಗಳು ಇಂದಿಗೂ ತೆರೆದುಕೊಂಡಿಲ್ಲ.

ಮಾರುಕಟ್ಟೆಯ ಸ್ಥಿರತೆಯನ್ನು ಕಾಪಾಡಲು, ತೆಂಗಿನ ಮೌಲ್ಯವರ್ಧನೆ ಮಾಡಲು ಹಾಗೂ ರೈತರ ಉತ್ಪನ್ನಗಳಿಗೆ ಅವರೇ ಬೆಲೆಯನ್ನು ನಿರ್ಧರಿಸುವ ಸಲುವಾಗಿ ತೆಂಗು ಅಭಿವೃದ್ಧಿ



ಮಂಡಳಿಯ ಉತ್ತೇಜನದೊಂದಿಗೆ ಸರ್ಕಾರದ ಯಾವ ಸಹಾಯಧನವೂ ಇಲ್ಲದೆ ರಾಜ್ಯದಾದ್ಯಂತ ಐದು ತೆಂಗು ಉತ್ಪಾದಕರ ಕಂಪನಿಗಳು ಪ್ರಾರಂಭವಾಗಿವೆ. ಸುಮಾರು ಒಂದು ಕೋಟಿ ತೆಂಗಿನ ಮರಗಳು ಈ ಕಂಪನಿಗಳ ವ್ಯಾಪ್ತಿಯಲ್ಲಿವೆ. ಮಂಡ್ಯದ ಮಹಾರಾಜಾಸ್, ಗುಬ್ಬಿಯ ಹೇಮಕಲ್ಪ, ತುರುವೇಕೆರೆಯ ಕಲ್ಪತರು ಮತ್ತು ಹೊಸದುರ್ಗದ ಕಲ್ಪವೃತ್ತ ಕಂಪನಿಗಳು ಸುಮಾರು ಎರಡು ಕೋಟಿಗಳಷ್ಟು ಷೇರು ಹಣ ಸಂಗ್ರಹ ಮಾಡಿ ರೈತರ ಉತ್ಪನ್ನಗಳ ಮಾರಾಟಕ್ಕೆ ಮುಂದಾಗಿವೆ. ಇವುಗಳಿಗೆ ಮಧ್ಯವರ್ತಿಗಳ ಹಾಗೂ ರವಾನೆದಾರರ ನಂಬರ್ ಟು ದಂಧೆಯಿಂದ ಯಾವುದೇ ವಹಿವಾಟನ್ನು ಪ್ರಾರಂಭಿಸಲು ಆಗುತ್ತಿಲ್ಲ. ಹಾಗಾಗಿ ನೀರಾ ಇದಕ್ಕೆ ಪರಿಹಾರವಾಗುತ್ತದೆ ಎಂದು ಎಲ್ಲ ಕಂಪನಿಗಳೂ ಕಾಯುತ್ತಿವೆ. ಇದಕ್ಕಾಗಿ ಈಗಾಗಲೇ ಕರ್ನಾಟಕದಾದ್ಯಂತ ಸಾವಿರಾರು ಯುವಜನರಿಗೆ ಮರ ಏರುವ ಕೌಶಲವನ್ನು ಕಲಿಸಿವೆ.

**ಹಿಂದಿನಿಂದಲೂ ಇತ್ತು:** ಭಾರತದಲ್ಲಿ ಅನಾದಿಕಾಲದಿಂದಲೂ ನೀರಾ ತಯಾರಿಸಲಾಗುತ್ತಿತ್ತು. ಇದು ಆಯುರ್ವೇದದಲ್ಲಿ ಚಿರಪರಿಚಿತವೂ ಹೌದು. ಎಲ್ಲ ರೀತಿಯ ರೋಗಗಳಿಗೂ ಇದು ಮದ್ದು. ರಾಜ್ಯದಲ್ಲಿ 1951ರಲ್ಲಿ ಮೊದಲ ಬಾರಿಗೆ ನೀರಾ ಉತ್ಪಾದಿಸಲಾಯಿತು. ಆಗಲೇ ಕರ್ನಾಟಕದ 167 ಪಟ್ಟಣ ಮತ್ತು 152 ಪ್ರಮುಖ ಗ್ರಾಮೀಣ ಭಾಗಗಳಲ್ಲಿ ನೀರಾ ಮಾರಾಟ ಕೇಂದ್ರಗಳು ಸ್ಥಾಪನೆಯಾದವು. 17 ನೀರಾ ಮತ್ತು ಪನೆ ಬೆಲ್ಲ ಸಹಕಾರಿ ಸಂಘಗಳು ಕಾರ್ಯನಿರ್ವಹಿಸತೊಡಗಿದವು. 1956ರಲ್ಲಿ ಮೊದಲ ಬಾರಿಗೆ ರಾಜ್ಯದಲ್ಲಿ ನೀರಾ ಮತ್ತು ಪನೆ ಬೆಲ್ಲ ಸಂಯುಕ್ತ ಸಂಘಗಳು ಅಸ್ತಿತ್ವಕ್ಕೆ ಬಂದವು. ಕೇವಲ ಹತ್ತು ವರ್ಷಗಳ ನಂತರ ಸರ್ಕಾರ ಜಾರಿಗೆ ತಂದ 1965ರ ಶಾಸನದಿಂದ ನೀರಾ ಉದ್ಯಮ ಸಂಪೂರ್ಣ ನೆಲ ಕಚ್ಚಿತು. ಪ್ರಸ್ತುತ ತೆಂಗಿನ ಮರಗಳನ್ನು ಅಬಕಾರಿ ಮರ ಎಂದು ಕಾಯ್ದೆ ಹೇಳುತ್ತದೆ.

**ಸಿಹಿ ನೀರಾದಲ್ಲಿ ಏನೇನಿರುತ್ತದೆ?:** ಸಿಹಿ ನೀರಾದಲ್ಲಿ ಅನೇಕ ಅತ್ಯುಪಯುಕ್ತ ಪೋಷಕಾಂಶಗಳಿವೆ. ಇದು ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಜಾಂಡೀಸ್ ನಿಯಂತ್ರಿಸುತ್ತದೆ. ಮೂತ್ರಕೋಶದ ಸಮಸ್ಯೆಗಳಿಗೆ ದಿವ್ಯೌಷಧ. ಖನಿಜಗಳಿಂದ ಶ್ರೀಮಂತವಾಗಿದೆ. ನೀರಾ ಮತ್ತು ಅದರ ಉತ್ಪನ್ನಗಳಲ್ಲಿ ಕೊಲೆಸ್ಟ್ರಾಲ್ ಶೂನ್ಯ. ಎಲ್ಲದಕ್ಕಿಂತ ಹೆಚ್ಚಾಗಿ ಅದರ ವಿಶಿಷ್ಟ ರುಚಿ ಮತ್ತು ಪರಿಮಳವು ನಮ್ಮನ್ನು ಸಮ್ಮೋಹನಗೊಳಿಸಿಬಿಡುತ್ತದೆ.

ಪುಟ III ನೋಡಿ

ವಿಜಯವಾಣಿ
ಸೋಮವಾರ • 25 ಮೇ 2015



ಮೊದಲ ಪುಟದಿಂದ...

# ತುಂತುರು... ಇಲ್ಲಿ ನೀರಾ ಹಾಡು...

ನೀರಾದಲ್ಲಿ ಫೈಟೋಕೆಮಿಕಲ್ಸ್‌ಗಳಾದ ಖನಿಜಗಳು, ವಿಟಮಿನ್‌ಗಳು, ಆ್ಯಂಟಿಆಕ್ಸಿಡೆಂಟ್‌ಗಳು ಹೆಚ್ಚಿರುತ್ತವೆ. ಆದ್ದರಿಂದ ಈ ತಾಜಾ ನೀರಾವನ್ನು ಪಾನೀಯವಾಗಿ ಕುಡಿಯುವುದು ಒಳ್ಳೆಯದು. ಇದರಿಂದ ಅನೇಕ ಬಗೆಯ ಉತ್ಪನ್ನಗಳನ್ನು ತಯಾರಿಸಬಹುದು. ಸಿಪಿ ನೀರಾ ಬೆಲ್ಲದ ಗ್ಲೈಸಮಿಕ್ ಇಂಡೆಕ್ಸ್ (ಜಿಐ) 35. ಆದ್ದರಿಂದ ನೀರಾ ಬೆಲ್ಲವನ್ನು ವಿಶೇಷವಾಗಿ ಮಧುಮೇಹಿಗಳಿಗೆ 'ದಯಾ ಸಕ್ಕರೆ' ಎಂದು ಮಾರಾಟ ಮಾಡಬಹುದು. ಫಿಲಿಪ್ಪೀನ್ಸ್‌ನ ಆಹಾರ ಮತ್ತು ಪೋಷಕಾಂಶ ಸಂಶೋಧನಾ ಸಂಸ್ಥೆಯು ನಡೆಸಿದ ಅಧ್ಯಯನದಲ್ಲಿ ಈ ವಿಚಾರ ಬಹಿರಂಗಗೊಂಡಿದೆ.

**ರೈತರಿಗೆ ಲಾಭ:** ಸಿಪಿ ನೀರಾ ನೀತಿಯ ಜಾರಿಯಿಂದ 100 ತೆಂಗಿನ ಮರಗಳನ್ನು ಹೊಂದಿರುವ ರೈತನಿಗೆ ಪ್ರತಿ ತಿಂಗಳು 3,37,500ರೂ. ಗಳಿಸಲು ಸಾಧ್ಯ ಎಂದು ಕೇಂದ್ರೀಯ ತೋಟಗಾರಿಕಾ ಬೆಳೆಗಳ ಸಂಶೋಧನಾ ಸಂಸ್ಥೆ ತಿಳಿಸಿದೆ.

ಸಿಪಿ ನೀರಾ ಉತ್ಪಾದನೆಯಿಂದ ರೈತರಿಗೆ ಹೆಚ್ಚಿನ ಲಾಭವಿರುವುದರಿಂದ ಕಡಿಮೆ ಲಾಭದ ಹೆಂಡ ಉತ್ಪಾದನೆಗೆ ರೈತರು ಮುಂದಾಗುವುದಿಲ್ಲ. ಸಿಪಿ ನೀರಾ ನೀತಿ ಜಾರಿಗೆ ತರುವುದರಿಂದ ಅಬಕಾರಿ ಆದಾಯಕ್ಕೆ ಯಾವುದೇ ಧಕ್ಕೆ ಆಗುವುದಿಲ್ಲ. ಕೇರಳ ಮಾದರಿಯಲ್ಲಿ ಸಿಪಿ ನೀರಾ ನೀತಿ ಜಾರಿಗೆ ತರುವುದರಿಂದ ತೆಂಗು ಉತ್ಪಾದಕರ ಕಂಪನಿಗಳಿಗೆ ಮಾತ್ರ ಸಿಪಿ ನೀರಾ ಉತ್ಪಾದನೆಗೆ ಅನುಮತಿ ನೀಡಬಹುದು. ಈ ಕಂಪನಿಗಳು ಕೂಡ 1956ರ ಕಂಪನಿಗಳ ನೋಂದಣಿ ಕಾಯ್ದೆಯಡಿ ನೋಂದಣಿಯಾಗಿರುತ್ತವೆ. ಇವುಗಳು ಕಾಯ್ದೆ ಮೀರಿದರೆ ಸರ್ಕಾರಕ್ಕೆ ನಿಯಂತ್ರಿಸಲು ಸುಲಭವಾಗುತ್ತದೆ. ತೆಂಗು ಉತ್ಪಾದಕರ ಕಂಪನಿಗಳು ಸಾರ್ವಜನಿಕ ಸಂಸ್ಥೆಗಳಾಗಿರುವುದರಿಂದ ಯಾವುದೇ ಕಾರಣದಿಂದ ಸಿಪಿ ನೀರಾ ನೀತಿಯ ಮಿತಿಗಳನ್ನು ಮೀರುವುದಿಲ್ಲ.

**ಸರ್ಕಾರಕ್ಕೆ ಲಾಭವೇನು?:** ಶೇ. ಒಂದರಷ್ಟು ತೆಂಗಿನ ಮರಗಳಿಂದ ನೀರಾ ಇಳಿಸಿ ಉತ್ಪನ್ನಗಳನ್ನು ತಯಾರಿಸಿದರೆ 2,250 ಕೋಟಿ ರೂ. ವರಮಾನವು ಸರ್ಕಾರದ ಬೊಕ್ಕಸಕ್ಕೆ ಬರಲಿದೆ. ಶೇ.10ರಷ್ಟು ತೆಂಗಿನ ಮರಗಳಿಂದ ನೀರಾ ಇಳಿಸಿದರೆ ಕರ್ನಾಟಕದಾದ್ಯಂತ ಐದು ಲಕ್ಷ ಹೊಸ ಉದ್ಯೋಗಗಳು ಪ್ರಾರಂಭವಾಗುತ್ತವೆ. ರಾಜ್ಯ ಸರ್ಕಾರಕ್ಕೆ 22,500 ಕೋಟಿ ರೂ. ಆದಾಯ ಬರಲಿದೆ ಎಂದು ತೆಂಗು ಅಭಿವೃದ್ಧಿ ಮಂಡಳಿ ಲೆಕ್ಕ ಹಾಕಿದೆ.

**ಕೇರಳದಲ್ಲಿ ನಡೆಯುತ್ತಿರುವುದೇನು?:** 2014ರ ಡಿಸೆಂಬರ್ ವೇಳೆಗೆ ಕೇರಳದ ಹದಿನಾಲ್ಕು ಜಿಲ್ಲೆಗಳಿಂದ 173 ತೆಂಗು ಉತ್ಪಾದಕರ ಒಕ್ಕೂಟಗಳು ನೀರಾ ಉತ್ಪಾದನೆಗೆ ಅಬಕಾರಿ ಇಲಾಖೆಯಲ್ಲಿ ಹೆಸರು ನೋಂದಾಯಿಸಿವೆ. ಅವುಗಳಲ್ಲಿ 64 ಒಕ್ಕೂಟಗಳಿಗೆ ನೀರಾ ಮತ್ತು ಅದರ ಉತ್ಪನ್ನಗಳ ತಯಾರಿಗೆ ಪರವಾನಗಿ ನೀಡಲಾಗಿದೆ. ಪರವಾನಗಿ ಪಡೆದ ಬಹುತೇಕ ಎಲ್ಲ ಒಕ್ಕೂಟಗಳೂ ನೀರಾ ಸಂಸ್ಕರಣ ಘಟಕಕ್ಕಾಗಿ ಭೂಮಿ ಖರೀದಿಸಿವೆ. ಕೆಲವು ಒಕ್ಕೂಟಗಳು ನೀರಾ ಸಂಸ್ಕರಣ ಘಟಕದ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತೊಡಗಿವೆ. 1,303 ಮರಗಳಿಂದ ನೀರಾ ಇಳಿಸಲಾಗುತ್ತಿದೆ. ಆಧುನಿಕ ರೀತಿಯಲ್ಲಿ ನೀರಾ ಇಳಿಸಲು 791 ಜನರನ್ನು ತರಬೇತಿಗೊಳಿಸಲಾಗಿದೆ. ಇಳಿಸಿದ ನೀರಾವನ್ನು ಕೇರಳದ ಅನೇಕ ಕಡೆ ಮಾರಾಟ ಮಾಡಲಾಗುತ್ತಿದೆ.

ಜಗತ್ತಿನ ತೆಂಗು ಬೆಳೆಯುವ 94 ದೇಶಗಳಲ್ಲಿ ಎಲ್ಲಿಯೂ ಇಂತಹ ನೀತಿಗಳಿಲ್ಲ. ಭಾರತದ ಶೇ.90 ರಷ್ಟು ತೆಂಗು ಬೆಳೆಯುವ ದಕ್ಷಿಣ ರಾಜ್ಯಗಳಲ್ಲಿ ಕೇರಳ ಮತ್ತು ತಮಿಳುನಾಡು ತಮ್ಮ ನಿಲುವು ಬದಲಿಸಿಕೊಂಡು ಸಿಪಿ ನೀರಾ ನೀತಿಯನ್ನು ಜಾರಿಗೆ ತಂದಿವೆ. ದೇಶದಲ್ಲಿಯೇ ತೆಂಗು ಉತ್ಪಾದನೆಯಲ್ಲಿ ಎರಡನೇ ಸ್ಥಾನದಲ್ಲಿರುವ ಕರ್ನಾಟಕದಲ್ಲಿ ಮಾತ್ರ ಅಬಕಾರಿ ಇಲಾಖೆ ಮತ್ತು ರೈತರಲ್ಲಿ ತಪ್ಪು ಗ್ರಹಿಕೆಗಳಿರುವ ಕಾರಣದಿಂದ ಆಹಾರ ಸಾಧ್ಯತೆಗಳಿರುವ ನೀರಾ ವಲಯ ಪ್ರಾರಂಭವಾಗಿಲ್ಲ. ರೈತ ಸಂಘದ ಹೋರಾಟಗಳಿಂದ ಅಬಕಾರಿ ಇಲಾಖೆಯ ಅನುಮಾನಗಳು ಹೆಚ್ಚುತ್ತಿವೆ. ಎಲ್ಲರೂ ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಿದೆ.

## ಏನಿದು ಸಿಪಿ ನೀರಾ?

**ನೀರಾ ಎಂದರೆ ಅದು ಹುಳಿ ಬಂದ ಹೆಂಡ ಅಲ್ಲ. ತೆಂಗಿನ ಹೊಂಬಾಳೆಯಿಂದ ತೆಗೆಯುವ ಸಿಹಿ ರಸ. ನೀರಾ ಒಂದು ಆರೋಗ್ಯಕರ ಪೇಯ. ಇದನ್ನು ಸಿಹಿ ಪಾನೀಯವಾಗಿ ಮಾರಾಟ ಮಾಡಬಹುದು. ಈ ದಿಸೆಯಲ್ಲಿ ದಾಪುಗಾಲು ಇಟ್ಟಿರುವ ಕೇರಳ ರಾಜ್ಯವು ತೆಂಗು ಆಧಾರಿತ ಸಣ್ಣ ಸಣ್ಣ ಕೈಗಾರಿಕೆಗಳಿಗೆ ಹೆಚ್ಚು ಬೆಂಬಲ ನೀಡುತ್ತಿದೆ. ಕೇರಳ ಸರ್ಕಾರವು ನೀರಾವನ್ನು ಇಳಿಸಲು ಅನುಮತಿ ನೀಡಿದೆ. ಅದು ಸಿಪಿ ನೀರಾ ಪಾಲಿಸಿಯನ್ನು 2014ರ ಮಾರ್ಚ್ ನಿಂದ ಜಾರಿಗೆ ತಂದಿದೆ. ಅದರಂತೆ ನೀರಾ ಇಳಿಸಲು ಮತ್ತು ಅದರ ಉತ್ಪನ್ನಗಳನ್ನು ಸಿದ್ಧಗೊಳಿಸಲು ಅದು ತೆಂಗು ಉತ್ಪಾದಕರ ಸಂಘ, ಒಕ್ಕೂಟ, ಕಂಪನಿಗಳಿಗೆ ಅನುಮತಿ ನೀಡಿದೆ. ಕರ್ನಾಟಕದಲ್ಲಿ ನೀರಾ ಹೋರಾಟಕ್ಕೆ ರೈತರ ಹತ್ಯೆ ನಡೆದು ಹದಿಮೂರು ವರ್ಷಗಳು ಸಂದಿವೆ. ಇಂದಿಗೂ ನೀರಾ ಇಳಿಸಲು ಅನುಮತಿ ಇಲ್ಲ. ಇಂತಹ ಕಾಯ್ದೆಗಳು ಜಗತ್ತಿನ ತೆಂಗು ಉತ್ಪಾದಿಸುವ 94 ದೇಶಗಳಲ್ಲಿ ಎಲ್ಲಿಯೂ ಇಲ್ಲ.**